# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಸಿಂಗಸಂದ್ರ ಗ್ರಾಮದ ಸ.ನಂ.24ರಲ್ಲಿ 27 ಗುಂಟೆ ಜಮೀನನ್ನು ಪಿಳೇಕಮ್ಮ ಮಹೇಶ್ವರ ದೇವಸ್ಥಾನ ಟ್ರಸ್ಟ್‌ಗೆ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ: 1) ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರ ಪತ್ರ ಸಂಖ್ಯೆ: ಎಲ್ಎನ್‌ಡಿ (ಎಸ್) ಸಿಆರ್ 442/2008-09, ದಿ:20.11.2008 ಮತ್ತು 15.09.2009.

2) ಕಾರ್ಯದರ್ಶಿ, ಭುವನೇಶ್ವರಿ ಸೇವಾ ಸಂಘ, ಬೆಂಗಳೂರು ಇವರ ಪತ್ರ ದಿ:26.05.2009.

*******

**ಪ್ರಸ್ತಾವನೆ**

ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಲ್ಲೆ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿ:20.11.2008ರ ಪತ್ರದಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಸಿಂಗಸಂದ್ರ ಗ್ರಾಮದ ಸ.ನಂ.24ರಲ್ಲಿ 0.27 ಗುಂಟೆ ಜಮೀನನ್ನು ಪಿಳೇಕಮ್ಮ ಮಹೇಶ್ವರ ದೇವಸ್ಥಾನ ಟ್ರಸ್ಟ್‌ಗೆ ಮಂಜೂರು ಮಾಡುವ ಬಗ್ಗೆ ಸರ್ಕಾರದ ಆದೇಶ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

2) ಜಿಲ್ಲಾಧಿಕಾರಿಗಳ ವರದಿಯನ್ವಯ ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಸಿಂಗಸಂದ್ರ ಗ್ರಾಮದ ಸ.ನಂ.24ರಲ್ಲಿನ 27 ಗುಂಟೆ ಜಮೀನು ಅಂತನ ತೋಪು ಎಂದು ವರ್ಗೀಕರಣಗೊಂಡಿರುತ್ತದೆ. ಸದರಿ ಜಮೀನಿನಲ್ಲಿ ಪಿಳೇಕಮ್ಮ ದೇವಾಲಯ ಮತ್ತು ಚಿಕ್ಕ ತೋಟ ಇರುತ್ತದೆ. ಪಿಳೇಕಮ್ಮ ಮಹೇಶ್ವರ ದೇವಸ್ಥಾನ ಟ್ರಸ್ಟ್ ದಿ:25.10.2008ರಂದು ನೋಂದಣಿಯಾಗಿದ್ದು, ದೇವಸ್ಥಾನವನ್ನು ಅಭಿವೃದ್ಧಿ ಪಡಿಸುವ ದೇಯೋದ್ದೇಶಗಳನ್ನು ಹೊಂದಿರುತ್ತದೆ. ಸದರಿ ಜಮೀನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುತ್ತದೆ.

3) ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 10(2)ರನ್ವಯ ಬೆಂಗಳೂರು ಮಹಾ ನಗರ ಪಾಲಿಕೆ ವ್ಯಾಪ್ತಿಯಲ್ಲಿನ ಹಾಗೂ ಪಾಲಿಕೆ ವ್ಯಾಪ್ತಿಯಿಂದ 16 ಕಿ.ಮೀ ಅಂತರದಲ್ಲಿರುವ ಸರ್ಕಾರಿ ಜಮೀನನ್ನು ಖಾಸಗಿ ಸಂಸ್ಥೆಗಳಿಗೆ ಮಂಜೂರು ಮಾಡಲು ಅವಕಾಶವಿರುವುದಿಲ್ಲ. ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 27ರಲ್ಲಿನ ಅಧಿಕಾರವನ್ನು ಚಲಾಯಿಸಿ ನಿಯಮಗಳನ್ನು ಸಡಿಲಿಸಲು ಸರ್ಕಾರಕ್ಕೆ ಅಧಿಕಾರವಿರುತ್ತದೆ. ಈ ಜಮೀನಿನಲ್ಲಿ ಈಗಾಗಲೇ ಪಿಳೇಕಮ್ಮ ದೇವಸ್ಥಾನ ಇರುವುದರಿಂದ ಈ ದೇವಸ್ಥಾನವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಪಿಳೇಕಮ್ಮ ಮಹೇಶ್ವರ ಟ್ರಸ್ಟ್ ಇವರು ಮಂಜೂರು ಮಾಡಲು ಕೋರಿರುವುದರಿಂದ ಈ ಜಮೀನನ್ನು ಸದರಿ ಟ್ರಸ್ಟ್‌ಗೆ ಮಂಜೂರು ಮಾಡಲು ಪರಿಶೀಲಿಸಲಾಗಿದೆ.

4) ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ದಿ:26.05.2009ರ ಪತ್ರದಲ್ಲಿ ಪ್ರಶ್ನಿತ ಜಮೀನಿನಲ್ಲಿ ಈಗಾಗಲೇ ಪಿಳೇಕಮ್ಮ ದೇವಸ್ಥಾನವಿರುವುದರಿಂದ, ಈ ದೇವಸ್ಥಾನವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಪಿಳೇಕಮ್ಮ ಮಹೇಶ್ವರ ಟ್ರಸ್ಟ್ ಇವರು

.................2

ಮಂಜೂರು ಮಾಡಲು ಕೋರಿರುವುದರಿಂದ ಈ ಜಮೀನನ್ನು ಸದರಿ ಟ್ರಸ್ಟ್‌ಗೆ ಮಂಜೂರು ಮಾಡಲು ಕೋರಿರುವುದನ್ನು ಪರಿಗಣಿಸಿ ಈ ಜಮೀನನ್ನು ಸದರಿ ಟ್ರಸ್ಟ್‌ಗೆ ಮಂಜೂರು ಮಾಡಲು ನಿರ್ಣಯಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 973 ಎಲ್‌ಜಿಬಿ 2008,**
**ಬೆಂಗಳೂರು, ದಿನಾಂಕ:10.05.2011.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 27ರಲ್ಲಿನ ಅಧಿಕಾರವನ್ನು ಚಲಾಯಿಸಿ ನಿಯಮ 10(2)ನ್ನು ಸಡಿಲಿಸಿ ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಸಿಂಗಸಂದ್ರ ಗ್ರಾಮದ ಸ.ನಂ.24ರಲ್ಲಿನ 27 ಗುಂಟೆ ಜಮೀನನ್ನು ಶ್ರೀ ಪಿಳೇಕಮ್ಮ ಮಹೇಶ್ವರ ದೇವಸ್ಥಾನ ಟ್ರಸ್ಟ್ ಇವರಿಗೆ ದೇವಸ್ಥಾನದ ಅಭಿವೃದ್ಧಿಗಾಗಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 21ರನ್ವಯ ಪ್ರಸಕ್ತ ಪೂರ್ಣ ಮಾರುಕಟ್ಟೆ ದರ ಹಾಗೂ ಇನ್ನಿತರ ಶುಲ್ಕಗಳನ್ನು ವಿಧಿಸಿ ಮಂಜೂರು ಮಾಡಲು ಸರ್ಕಾರವು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಇ. ಈಶ್ವರ ನಾಯಕ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ.ಮಂ).

**ಇವರಿಗೆ,**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ 100 ಪ್ರತಿಗಳನ್ನು ಈ ಇಲಾಖೆಗೆ ಒದಗಿಸಲು ಕೋರಿದೆ.

**ಇವರಿಗೆ,**

1. ಮಹಾಲೇಖಪಾಲರು (ಲೆಕ್ಕ ಪತ್ರ / ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು.
2. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು.
3. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
4. ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
5. ಕಾರ್ಯದರ್ಶಿ, ಭುವನೇಶ್ವರಿ ಸೇವಾ ಸಂಘ, ನಂ.150, 7ನೇ ಕ್ರಾಸ್, ಸಿಂಗಸಂದ್ರ, ಹೊಸೂರು ಮುಖ್ಯರಸ್ತೆ, ಬೇಗೂರು ಹೋಬಳಿ, ಬೆಂಗಳೂರು–560 068.
6. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಚಿವ ಸಂಪುಟ (ಸಿ 342/2010).
7. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 7 ಮತ್ತು 8), ವಿಧಾನ ಸೌಧ, ಬೆಂಗಳೂರು.
9. ಸರ್ಕಾರದ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ ಕಂದಾಯ ಇಲಾಖೆ, ಬೆಂಗಳೂರು.
10. ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ (ಸಮನ್ವಯ) ಇವರಿಗೆ ಕಾಂಪೆಂಡಿಯಂನಲ್ಲಿ ಸೇರ್ಪಡೆ ಮಾಡಲು.
11. ಮಾಸಿಕ ಸಂಕಲನ / ಶಾಖಾ ರಕ್ಷಾ ಕಡತ.

Land Grant